**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 5288/2022**

**ಸಾಕ್ಷಿಗೆ ದಿನಾಂಕ 9.12.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗಾಯತ್ರಿ | ಪಿ.ಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | : | ಸಣ್ಣಸ್ವಾಮಿ | ಸಿ.ಡಬ್ಲ್ಯೂ-4 |
| ವಯಸ್ಸು | : | 40 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಆಲನಹಳ್ಳಿ | |

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ಚಾಸ 1 ನನ್ನ ಗಂಡ, ಚಾಸ 2 ನನ್ನ ಮೈದುನ. ನನಗೆ ಚಾಸ 3 ಮತ್ತು 5 ರಿಂದ 12 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರು ನನ್ನ ಸಂಬಂಧಿಕರಾಗಿರುತ್ತಾರೆ. ನಮ್ಮ ಮನೆಯ ಪಕ್ಕದಲ್ಲಿ ನನ್ನ ಅತ್ತಿಗೆಯಾದ ಸಣ್ಣತಾಯಮ್ಮನವರ ಮನೆ ಇರುತ್ತದೆ. ಸದರಿ ಸಣ್ಣತಾಯಮ್ಮನ ಮನೆ ಹತ್ತಿರ ಚರಂಡಿ ಇದ್ದು ಚರಂಡಿ ಇದ್ದು ಈಗ ಸುಮಾರು 5 ವರ್ಷದ ಹಿಂದೆ ಸದರಿ ಚರಂಡಿ ನೀರಿನ ವಿಚಾರವಾಗಿ ಗಲಾಟೆಯಾಗಿರುತ್ತದೆ. ಮರುದಿನ ಸಂಜೆ 5 ಗಂಟೆಯಲ್ಲಿ ನಾನು ಮತ್ತು ನನ್ನ ಯಜಮಾನರು ನಮ್ಮ ಮನೆಯ ಹತ್ತಿರದ ಸೈಟಿನಲ್ಲಿ ದನಗಳನ್ನು ಕಟ್ಟುತ್ತಿದ್ದಾಗ ಆರೋಪಿತರು ಸದರಿ ಸ್ಥಳಕ್ಕೆ ಬಂದು ನನ್ನ ಗಂಡನಿಗೆ ಸೂಳೆಮಗನೆ ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಶೂ ಕಾಲಿನಿಂದ ನನ್ನ ಗಂಡನ ಎದೆಗೆ ಒದ್ದಿರುತ್ತಾರೆ. ನನ್ನ ಗಂಡ ಕೆಳಗೆ ಬಿದ್ದಾಗ 1 ನೇ ಆರೋಪಿಯು ಮೈಕೈಗೆ ಒದ್ದಿರುತ್ತಾನೆ. ನಂತರ ನಾನು ಗಲಾಟೆ ಬಿಡಿಸಲು ಹೋದಾಗ 1 ನೇ ಆರೋಪಿಯು ನನ್ನ ರವಿಕೆಯನ್ನು ಹಿಡಿದು ಎಳೆದಾಡಿ ನನಗೆ ಹೊಡೆದಿರುತ್ತಾನೆ. ನಂತರ ಚಾಸ 5 ರವರು ಗಲಾಟೆ ಬಿಡಿಸಲು ಬಂದಾಗ ಚಾಸ 5 ರವರಿಗೆ ಆರೋಪಿತರು ಚಾಕುವಿನಿಂದ ಬಲಗಾಲಿಗೆ ಹೊಡೆದು ಗಾಯ ಉಂಟು ಮಾಡಿರುತ್ತಾರೆ. ನಂತರ ಚಾಸ 7 ರಿಂದ ಚಾಸ 10 ರವರು ಸ್ಥಳಕ್ಕೆ ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. 1 ನೇ ಆರೋಪಿಯು ಸ್ಥಳದಿಂದ ಹೋಗುವಾಗ ನನ್ನ ಮಗನನ್ನು ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾನೆ. ನಂತರ ನನ್ನ ಗಂಡನನ್ನು ಚಾಸ 9 ಹಾಗೂ ನನ್ನ ಮಗ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಗಲಾಟೆಯ ವಿಚಾರವಾಗಿ ನನ್ನ ಯಜಮಾನರು ದೂರು

ನೀಡಿರುತ್ತಾರೆ.  ಈ ದಿನ ನ್ಯಾಯಾಲಯದ ಮುಂದಿರುವ ಎಂಓ 1 ಚಾಕುವಿನಿಂದ 1 ನೇ ಆರೋಪಿಯು ಹಲ್ಲೆ ಮಾಡಿರುತ್ತಾನೆ. ಎಂಓ 1 ಮತ್ತು 2 ಸದರಿ ದಿನ ನಾನು ಧರಿಸಿದ್ದ ರವಿಕೆ ಮತ್ತು ಸೀರೆಯಾಗಿರುತ್ತದೆ. ಘಟನೆಯ ವಿಚಾರವಾಗಿ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.  ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಸದರಿ ಕೃತ್ಯವನ್ನು ಎಸಗಿರುತ್ತಾರೆ.

ಪಾಟೀಸವಾಲುಃ ಆರೋಪಿತರ  ಪರ ವಕೀಲರು ಸಮಯ ಕೋರಿದ್ದು 200/- ರೂ. ಖರ್ಚಿನೊಂದಿಗೆ ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ